ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 874

ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 09.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 05 ವರ್ಷಗಳಲ್ಲಿ ಕರ್ನಾಟಕದ ಎ.ಪಿ.ಎಂ.ಸಿ., ಮುಖಾಂತರ ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ (FCI) ಮೂಲಕ ಕೇಂದ್ರ ಸರ್ಕಾರವು ಖರೀದಿಸಿದ ಪ್ರಮಾಣ ಎಷ್ಟು; (ಆಹಾರ ಧಾನ್ಯಗಳ ಐಟಂವಾರು, ವರ್ಷವಾರು, ಖರೀದಿವಾರು ತಖ್ತೆ ಒದಗಿಸುವುದು ಮತ್ತು ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ (FCI) ಮೂಲಕ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಪಡಿತರ ವಿತರಣೆಗಾಗಿ ಮಂಜೂರು ಮಾಡಿದ ಆಹಾರ ಧಾನ್ಯಗಳ ಐಟಂವಾರು, ಘಟಕವಾರು, ವರ್ಷವಾರು, ಖರೀದಿವಾರು ತಖ್ತೆ ಒದಗಿಸುವುದು) ಈ ಆಹಾರ ಧಾನ್ಯಗಳನ್ನು ಎಲ್ಲಿ ಶೇಖರಣೆ ಮಾಡಲಾಗಿದೆ; ಇದಕ್ಕೆ ಗುರಿ ನಿಗದಿಪಡಿಸಲಾಗಿದೆಯೇ;</td><td>ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಖರೀದಿಸಲಾದ ಆಹಾರ ಧಾನ್ಯಗಳ ವಿವರ ಈ ಕೆಳಕಂಡಂತಿದೆ:

<table>
<tr><th>ವರ್ಷ</th><th>ಭತ್ತ ಮೆ.ಟನ್</th><th>ರಾಗಿ ಮೆ.ಟನ್</th><th>ಬಿಳಿಜೋಳ ಮೆ.ಟನ್</th></tr>
<tr><td>2015-16</td><td>81222</td><td>203769.060</td><td>7128.800</td></tr>
<tr><td>2016-17</td><td>-</td><td>-</td><td>-</td></tr>
<tr><td>2017-18</td><td>-</td><td>37723.441</td><td>-</td></tr>
<tr><td>2018-19</td><td>87909.727</td><td>94390.008</td><td>1129.600</td></tr>
<tr><td>2019-20</td><td>61379.664</td><td>193243.068</td><td>9256.350</td></tr>
</table>

ಕಳೆದ 5 ವರ್ಷಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿ ಪ್ರತಿ ಮಾಹೆ 217403 ಮೆ.ಟನ್ ಆಹಾರಧಾನ್ಯ ಒದಗಿಸುತ್ತಿದೆ. ಸದರಿ ಪ್ರಮಾಣವನ್ನು ಕೇಂದ್ರ ಸರ್ಕಾರ ನಿಗಧಿಪಡಿಸಿದ ಕೇಂದ್ರ ಎನ್.ಎಫ್.ಎಸ್.ಎ. ವ್ಯಾಪ್ತಿಯ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಒದಗಿಸಲಾಗುವ 217403 ಮೆ.ಟನ್ ಆಹಾರಧಾನ್ಯವನ್ನು ಭಾರತ ಆಹಾರ ನಿಗಮವು ಹೊಂದಿರುವ ಜಿಲ್ಲಾವಾರು, ತಾಲ್ಲೂಕುವಾರು ಗೋದಾಮುಗಳಲ್ಲಿ ಸಂಗ್ರಹಿಸಿ ರಾಜ್ಯ ಸರ್ಕಾರಕ್ಕೆ ಹಂಚಿಕೆ ಮಾಡಲಾಗುತ್ತಿದೆ. ಪ್ರತಿ ಮಾಹೆ ಜಿಲ್ಲಾವಾರು ಅರ್ಹ ಪಡಿತರ ಚೀಟಿಗಳ ಬೇಡಿಕೆಯನುಸಾರ ತಾಲ್ಲೂಕು ಮಟ್ಟದ ಭಾರತ ಆಹಾರ ನಿಗಮದ ಗೋದಾಮುಗಳಿಂದ ತಾಲ್ಲೂಕು ಸಗಟು ಗೋದಾಮುಗಳಿಗೆ ಎತ್ತುವಳಿ ಮಾಡಿ ದಾಸ್ತಾನಿರಿಸಲಾಗುತ್ತಿದೆ.</td></tr>
</table>

ಆ	ಖಾಸಗಿ ಸಂಸ್ಥೆಗಳಿಗೆ ಆಹಾರ ಧಾನ್ಯ ಸಂಗ್ರಹಿಸುವ ಅಧಿಕಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಖಾಸಗಿ ಸಂಸ್ಥೆಗಳಿಗೆ ಪರವಾನಿಗೆ ನೀಡಲಾಗಿದೆ; ಅವು ಯಾವುವು; (FCI ಗೆ ಹೊರತಾಗಿ ಖರೀದಿ ಮಾಡಿ ಪಡಿತರ ವ್ಯವಸ್ಥೆಗೆ ವಿತರಣೆ ಮಾಡಿದ ಆಹಾರ ಧಾನ್ಯಗಳ ಐಟಂವಾರು, ವರ್ಷವಾರು, ಖರೀದಿವಾರು ತಖ್ತೆ ಒದಗಿಸುವುದು;	ಇಲ್ಲ.
ಇ	ಖಾಸಗಿಯವರಿಗೆ ಪರವಾನಿಗೆ ನೀಡಿದಲ್ಲಿ ಆಹಾರ ಧಾನ್ಯಗಳ ದರದ ಮೇಲಿನ ನಿಯಂತ್ರಣ ಸರ್ಕಾರದ ಕೈತಪ್ಪಿ ಹೋಗುವುದಿಲ್ಲವೇ; ಖಾಸಗಿಯವರು ದುರ್ಬಳಕೆ ಮಾಡಿಕೊಂಡು ಆಹಾರ ಧಾನ್ಯಗಳ ಕೃತಕ ಅಭಾವ ಸೃಷ್ಟಿಸಿ ಬೆಲೆಗಳನ್ನು ಏರಿಸುವ ಅಪಾಯದ ಬಗ್ಗೆ ಸರ್ಕಾರದ ಚಿಂತನೆ ನಡೆಸಿದೆಯೇ; ಈ ಬಗ್ಗೆ ಸರ್ಕಾರದ ತೆಗೆದುಕೊಳ್ಳುವ ಕ್ರಮಗಳಾವುವು?	ಉದ್ಭವಿಸುವುದಿಲ್ಲ.

ಆನಾಸ 23 ಆರ್‌ಪಿಆರ್ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು